**ಸಿಸಿ ನಂ. 36/2024**

**ಸಿ.ಡಬ್ಲೂ–6 ಪಿ.ಡ್ಲೂ:2**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ ನ್ಯಾಯಾಲಯ, ಸಿಂದಗಿ.**

| | | |
|---|---|---|
| ಸಾಕ್ಷಿದಾರನ ಹೆಸರು | : | ಶಿವಾನಂದ ಕೊಂಡಗೂಳಿ |
| ತಂದೆಯ ಹೆಸರು | : | ರೇವಣಸಿದ್ದಪ್ಪ |
| ವಯಸ್ಸು | : | 64 ವರ್ಷ |
| ಉದ್ಯೂಗ | : | ನಿವೃತ್ತ ನೌಕರ |
| ವಾಸ ಸ್ಥಳ | : | ಸಿಂದಗಿ |

ದಿನಾಂಕ 21–10–2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆ: ಸರಕಾರಿ ಸಹಾಯಕ ಅಭಿಯೋಜಕ ರವರಿಂದ.**

ಚಾ.ಸಾ. 1 ನನ್ನ ಹೆಂಡತಿ. ಚಾ.ಸಾ. 7 ನನ್ನ ಮಗಳು. ನಾನು ಸಿಂದಗಿ ನಗರದ ಅರ್ಜುಣಗಿ ಲೈಓಟನಲ್ಲಿ ವಾಸ ಇದ್ದೇನೆ. ನಮ್ಮ ಮನೆಯಲ್ಲಿ ನಾನು ಮತ್ತು ನನ್ನ ಹೆಂಡತಿ ಮತ್ತು ನನ್ನ ಮಗಳ ವಾಸವಾಗಿದ್ದೇವು. ದಿ.27–08–2023 ರಂದು ನಾನು ಮತ್ತು ನನ್ನ ಹೆಂಡತಿ ಸೇರಿ ಬಾಲ್ಕಿಗೆ ಹೋಗುವವರು ಇದ್ದೇವು. ಬೆಳಿಗ್ಗೆ 5–00 ಗಂಟೆಗೆ ಎದ್ದು, ನಮ್ಮ ಮನೆಯ ಕಾಟದ ಮೇಲೆ ಇಟ್ಟಿದ್ದ ತಾಳಿ ಸರವನ್ನು ನೋಡಲಾಗಿ, ಅಲ್ಲಿ ಅದು ಇರಲಿಲ್ಲ. ನಂತರ ಅಲ್ಲಿ ಇಲ್ಲಿ ಹುಡುಕಿದರು ಅದು ಸಿಕ್ಕಿಲ್ಲ. ಈ ಬಗ್ಗೆ ಚಾ.ಸಾ.1 ರವರು ಈ ಬಗ್ಗೆ ದೂರನ್ನು ನೀಡಿರುತ್ತೇವೆ. ನಂತರ 5–6 ತಿಂಗಳ ನಂತರ ಪೊಲೀಸರು ತಾಳಿ ಸರ ಸಿಕ್ಕಿರುವುದಾಗಿ ಹೇಳಿರುತ್ತಾರೆ. ಬಾಗೇವಾಡಿಯಲ್ಲಿ ಸಿಕ್ಕಿದೆ ಎಂದು ಹೇಳಿರುತ್ತಾರೆ. ಮಶಾಕ ಎನ್ನುವವರು ಕಳ್ಳತನ ಮಾಡಿದ ಬಗ್ಗೆ ಹೇಳಿರುತ್ತಾರೆ.

**ಸಿಸಿ ನಂ. 36/2024**

**ಸಿ.ಡಬ್ಲೂ-6 ಪಿ.ಡ್ಲೂ:2**

ಆತನನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ. ಪೊಲೀಸರು ಮಶಾಕ ಕಳ್ಳತನ ಮಾಡಿದ ಬಗ್ಗೆ ನನಗೆ ಹೇಳಿದ್ದು, ನಾನು ಪೊಲೀಸರ ಮುಂದೆ ಹೇಳೀಕೆಯನ್ನು ನೀಡಿರುತ್ತೇನೆ.

**(ಈ ಹಂತದಲ್ಲಿ ಸರಕಾರಿ ಸಹಾಯಕರು ಅಭೀಯೋಜಕರು ಸಾಕ್ಷಿಯನ್ನು ಭಾಗಶ: ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟೀ ಸವಾಲು: ಸರಕಾರಿ ಸಹಾಯಕ ಅಭೀಯೋಜಕ ರವರಿಂದ.**

ದಿ.27-08-2023 ರಂದು ನನ್ನ ಹೆಂಡತಿ ಸ್ನಾನಕ್ಕೆ ಹೋಗುವಾಗ ತಾಳಿ ಸರವನ್ನು ತೆಗೆದು ತಲೆ ದಿಂಬಿನ ಹತ್ತಿರ ಇಟ್ಟಿದ್ದೆ ಎಂದರೆ ಸರಿ. ನನ್ನ ಹೆಂಡತಿ ಸ್ನಾನ ಮಾಡಿ ಬಂದು ನೋಡಿದಾಗ ತಾಳಿ ಸರ ಇರಲಿಲ್ಲ ಎಂದರೆ ಸರಿ. ಅದು ಮೂರು ವರೆ ತೊಲೆ ಬಂಗಾರದ ತಾಳಿ ಸರ ಆಗಿತ್ತು ಎಂದರೆ ಸರಿ. ಯಾರೋ ಕಳ್ಳರು ಕಿಟಕಿಯಲ್ಲಿ ಕೈ ಹಾಕಿ ಅದನ್ನು ಕಳವು ಮಾಡಿಕೊಂಡು ಹೋಗಿದ್ದರು ಎಂದರೆ ಸರಿ. ಈ ವಿಷಯವನ್ನು ದೂರಿನಲ್ಲಿ ಬರೆದುಕೊಟ್ಟಿದ್ದೇನೆ ಎಂದರೆ ಸರಿ. ದಿ.02-10-2023 ರಂದು ಪೊಲೀಸರು ನನ್ನನ್ನು ಕರೆದಿದ್ದರು ಎಂದರೆ ಸರಿ. ಪೊಲೀಸರು ನ್ಯಾಯಾಲಯದ ಮುಂದೆ ಇರುವ ವ್ಯಕ್ತಿಯು ಕಳ್ಳತನ ಮಾಡಿಕೊಂಡು ಹೋಗಿರುವುದಾಗಿ ಹೇಳಿ ಆತನನ್ನು ತೋರಿಸಿದ್ದರು ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಸಿಸಿ ನಂ. 36/2024**

**ಸಿ.ಡಬ್ಲೂ–6 ಪಿ.ಡ್ಲೂ:2**

**<u>ಪಾಟೀ ಸವಾಲು: ಶ್ರೀ. ಎನ್. ಎಸ್.ಪಿ. ಆರೋಪಿ ಪರ ವಕೀಲರಿಂದ</u>**

ನನ್ನ ಹೆಂಡತಿಯ ಸರವನ್ನು ಯಾರು ತೆಗೆದುಕೊಂಡು ಹೋಗಿದ್ದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ದಿ. 27–08–2023 ರಂದು ನಾನು ದೂರನ್ನು ನೀಡಿದ್ದೇನೆ. ಪೊಲೀಸರು ನನಗೆ ಯಾರನ್ನು ತೋರಿಸಿಲ್ಲ ಎಂದರೆ ಸರಿ. ತಾಳಿ ಸರವನ್ನು ಪೊಲೀಸರು ಕೊಟ್ಟಿದ್ದಾರೆ ಎಂದರೆ ಸರಿ. ದೂರಿನಲ್ಲಿ ಏನೆಲ್ಲ ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನ್ಯಾಯಾಲಯದ ಮುಂದೆ ಇರುವ ವ್ಯಕ್ತಿಯನ್ನು ನಾನು ಯಾವತ್ತು ನೋಡಿಲ್ಲ ಎಂದರೆ ಸರಿ. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ: ಇಲ್ಲ.</u>**

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸರಿ.ಇದೆ.

ಹಿರಿಯ ಸಿವ್ಹಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.
ಸಿಂದಗಿ